ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/24/2016-17. ದಿನಾಂಕ:09-08-2016.

<table>
<tr><th>ವಾದಿಗಳು</th><th>ಪ್ರತಿವಾದಿಗಳು</th></tr>
<tr><td>1)ಕೆ.ಎಸ್.ಬಸವರಾಜಪ್ಪ ತಂದೆ ಎಸ್.ಪ್ರಭಪ್ಪ<br>2)ಎ.ಎಸ್.ಶಿವಪ್ರಕಾಶ ತಂದೆ ಎ.ಎಸ್.ವೀರಣ್ಣ<br>3)ಕೊಟ್ರಬಸಪ್ಪ ತಂದೆ ಎಸ್.ವೀರಣ್ಣ<br>ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು</td><td>ವೀರಭದ್ರಪ್ಪ ತಂದೆ ಲೇಟ್ ಎ.ಕೊಟ್ರಬಸಪ್ಪ<br>ಕೊಟ್ಟೂರು ಪಟ್ಟಣ<br>ಕೂಡ್ಲಿಗಿ ತಾಲೂಕು</td></tr>
<tr><td colspan="2">ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 248. 249. ವಿಸ್ತೀರ್ಣ 2-25. 2-54. ಎಕ್ರೆ ಜಮೀನುಗಳನ್ನು ಹಕ್ಕು ಬಿಡುಗಡೆ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.</td></tr>
</table>

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 248. 249. ವಿಸ್ತೀರ್ಣ 2-25. 2-54. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಕೊಟ್ಟೂರು ಪಟ್ಟಣದ ಎ.ಎಸ್.ಶಿವಪ್ರಕಾಶ ತಂದೆ ಎ.ಎಸ್.ವೀರಣ್ಣ ಇವರು ದಿನಾಂಕ 05-03-1993 ರ ಹಕ್ಕು ಬಿಡುಗಡೆ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೆ.ಅಯ್ಯನಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 24-09-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಹಾಲಿ ಪಟ್ಟದಾರರ ವಾರಸುದಾರರ ಪೈಕಿ ವಿರಭದ್ರಪ್ಪ ಇವರು ನಮೂನೆ-21ಕ್ಕೆ ಸಹಿ ಮಾಡಿಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 24/2015-16. ದಿನಾಂಕ 23-10-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 21-06-2016 ರಿಂದ 09-08-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರ ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರ ನ್ಯಾಯಾವಾದಿಗಳು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 248. 249. ವಿಸ್ತೀರ್ಣ 2-25. 2-54. ಎಕ್ರೆ ಜಮೀನುಗಳು ಅರ್ಜಿದಾರರ ತಾತನವರಾದ ಕೊಟ್ರಬಸಪ್ಪ ತಂದೆ ವೀರಭದ್ರಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಹೊಂದಿದ್ದು ಇವರು ತಮ್ಮ ಜೀವಿತಾಕಾಲದಲ್ಲಿ ತಮ್ಮ ಸ್ವ ಇಚ್ಚೇಯಿಂದ ದಿನಾಂಕ 05-03-1993 ರಂದು ಸದರಿ ಕೊಟ್ರಬಸಪ್ಪ ಇವರ ಮಗನ ಮಗನಾದ ಎ.ಎಸ್.ಶಿವಪ್ರಕಾಶ ತಂದೆ ಎ.ಎಸ್.ವೀರಣ್ಣ ಇವರ ಹೆಸರಲ್ಲಿ ಹಕ್ಕು ಬಿಡುಗಡೆ ಪತ್ರ ಬರೇಯಿಸಿ ಕೊಟ್ಟಿರುವುದು ನಿಜವಿರುತ್ತದೆ. ಕಾರಣ ಸದರಿ ಹಕ್ಕು ಬಿಡುಗಡೆ ಪತ್ರ ಪ್ರಕಾರ ಅರ್ಜಿದಾರರಾದ ಎ.ಎಸ್.ಶಿವಪ್ರಕಾಶ ತಂದೆ ಎ.ಎಸ್.ವೀರಣ್ಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮು.ತಿ.ನೋ:-2

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ಪ್ರತಿವಾದಿಯ ಪಿತ್ರಾರ್ಜಿತ ಜಮೀನುಗಳಾಗಿದ್ದು ಪ್ರತಿವಾದಿಯ ಮೂಲ ಪಟ್ಟೆದಾರರಾದ ಗುರುಸಿದ್ದಪ್ಪಗಾರಿ ಆನಂದದೇವನಹಳ್ಳಿ ವೀರಭದ್ರಪ್ಪ ಇವರು ನಿಧನದ ನಂತರ ಪ್ರತಿವಾದಿಯ ತಾತನವರಾದ ಎ.ಎಸ್.ಕೊಟ್ರಬಸಪ್ಪ ತಂದೆ ವೀರಭದ್ರಪ್ಪ ಇವರ ಹೆಸರಲ್ಲಿ ಬಂದಿದ್ದು ಸದರಿ ಕೊಟ್ರಬಸಪ್ಪ ಇವರಿಗೆ ಮೂರು ಜನ ಮಕ್ಕಳಾದ ವೀರಣ್ಣ. ಕೊಟ್ರೇಶಪ್ಪ. ವೀರಭದ್ರಪ್ಪ ಇವರ ಪಿತ್ರಾರ್ಜಿತ ಜಮೀನುಗಳಾಗಿರುತ್ತವೆ. ಹಾಗೂ ಸದರಿ ಹಕ್ಕು ಬಿಡುಗಡೆ ಪತ್ರವು ನೊಂದಣಿ ರಹಿತ ಪತ್ರವಾಗಿರುವುದರಿಂದ ಕರ್ನಾಟಕ ಭೂಕಂದಾಯ ಕಾಯ್ದೇ 1964 ರ ಕಲಂ 128 ಮತ್ತು 129 ರ ಅಡಿಯಲ್ಲಿ ನೊಂದಣಿಯಾಗಿರುವುದಿಲ್ಲ ಕಾರಣ ಸದರಿ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಅರ್ಜಿದಾರರು ನೊಂದಣಿವಲ್ಲದ ಹಕ್ಕು ಬಿಡುಗಡೆ ಪತ್ರವನ್ನು ಆಧರಿಸಿ ಹಕ್ಕು ಬದಲಾವಣೆ ಕೋರಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೆ.ಅಯ್ಯನಹಳ್ಳಿ ಗ್ರಾಮದ ಸನಂ 248. 249. ವಿಸ್ತೀರ್ಣ 2-25. 2-54. ಎಕ್ರೆ ಜಮೀನುಗಳ ಅರ್ಜಿದಾರರು ನೊಂದಾಯಿತವಲ್ಲದ ಹಕ್ಕು ಬಿಡುಗಡೆ ಪತ್ರವನ್ನು ಆಧರಿಸಿ ಹಕ್ಕು ಬದಲಾವಣೆ ಕೋರಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುತ್ತಾ ಬಾದಿತರು ಮಾನ್ಯ ಸಿವಿಲ್ ನ್ಯಾಯಾಲಯದ ಮೋರೆ ಹೋಗಲು ಆದೇಶಿಸುತ್ತಾ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 09-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೆ.ಎಸ್.ಬಸವರಾಜ ತಂದೆ ಎಸ್.ಪ್ರಭಪ್ಪ. ಎ.ಎಸ್.ಶಿವಪ್ರಕಾಶ ತಂದೆ ಎ.ಎಸ್.ವೀರಣ್ಣ ಹಾಗೂ ಇತರರು ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಕೆ.ಎಸ್.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ವೀರಭದ್ರಪ್ಪ ತಂದೆ ಲೇಟ್ ಎ.ಕೊಟ್ರಬಸಪ್ಪ. ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಎ.ಶಿವರಾಜ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.